ಅಳ್ತಿನಿ. ಇದೇ ಇದ್ರ ಸೌಂದರ್ಯ ಅದ...

...ಈ ಕಲೆ ತಾಯಿನ ಹಿಡ್ಕೊಂಡ್ರ ಆಕಿ ನಮ್ಗ ದಾರಿ ತೋರ್ತಾಳ. ಈ ಸಮುದಾಯದಿಂದ ಎಷ್ಟೊಂದು ತಗೊಂಡಿವಿ... ಅವ್ರಿಗಾಗಿ ನಾವು ಏನಾರ ತಿರ್ಗಿ ಕೊಡ್ಬೇಕು ಅನ್ನಿ 'ಅರ್ಬನ್ ಫೋಕ್ ಪ್ರಾಜೆಕ್ಟ್' ಅಂತ ಸಂಸ್ಥೆ ಮಾಡಿವಿ, ನಿರಂತರ ಕೆಲ್ಸ ಮಾಡ್ತಾ ಬಂದಿವಿ. ನಾನು ಹಾಡೋ ಹಾಡು ಏನದಲ್ಲ ಅದಕ್ಕೆ ಒಬ್ರಿಗೆ ಕ್ರೆಡಿಟ್ ಕೊಟ್ಟು ಸುಮ್ಮನಾಗಕ ಇದು ಒಬ್ರ ಕತಿ ಅಲ್ಲ, ಇದು ಎಲ್ರ ಕತಿ ಅದ. ಅದ್ಕಂತ ಇಡೀ ಕಮ್ಯುನಿಟಿಗೆ ಅನ್ಕೂಲ ಆಗೂ ಹಂಗ ಅವ್ರಿಗೆ ವರ್ಕ್‌ಶಾಪ್ ಮಾಡೂದು, ನಮ್ಮ ಗುರುಗಳಿಗೆ ಹೊಸ ಶಿಷ್ಯರನ್ನ ಕೊಡಾದು ಮಾಡ್ತಾ ಇದೀವಿ. ಈ ಕಲೆ ಉಳೀಬೇಕಂದ್ರ ಅದ್ನ ನಮ್ ಮೈಯಾಗ ಹಾಕ್ಕೋಬೇಕಲ್ಲ? 'ಇದು ಉಳಿಬೇಕು ಉಳೀಬೇಕು' ಅಂತ ಹೇಳ್ತಾ, ಹೋರಾಟದ ಭಾಷೆ ಬಳಸಿದರಷ್ಟೇ ಯಾವ್ದೂ ಉಳ್ಯಾಂಗಿಲ್ಲ... ಸುಮ್ನಾ ಆ ಭಾಷಿ ಮಾತಾಡ್ತಾ, ಆ ಹಾಡ್ಗೋಳು ಹಾಡ್ತಾ ಹೋದ್ರ ಅವೇ ಉಳಿತವ. ಮೈಯಾಗ ಹಾಕ್ಕೋಬೇಕು ಅನ್ನಾ ಮಾತು ನಮ್ಗ ಅನುಭವಕ್ಕ ಬಂದಿದ್ದು ದೇವದಾಸಿ ರಾಧಾಬಾಯಿ ಮನಿಗೆ ಹೋದಾಗ. ನಾ ಆಕಿಗ್ಹೇಳ್ದೆ, '... ಈ ಹಾಡು ಉಳಿಬೇಕ್ರಿ, ನಾ ಇದ್ನ ರೆಕಾರ್ಡ್ ಮಾಡ್ತೀನಿ, ಆನ್‌ಲೈನ್ ಹಾಕ್ತೀನಿ' ಅಂತ. ಆಕಿ ತಿರಗಿ ಒಂದೇ ಮಾತಂದಳು, 'ನೀ ಯಾರೂ ಅಲ್ಲವ, ನಾ ಯಾರೂ ಅಲ್ಲ ಕಲಿ ಉಳಸ್ಲಾಕ... ಕಲಿ ನಮಕಿಂತ ದೊಡ್ಡದದ. ನೀ ಉಳ್ಸಬೇಕು ಅಂದ್ರ ಅದ್ನ ಮೈಯಾಗ ಹಾಕ್ಕೊ' ಅಂತ. ಈ ಮಾತು ಪ್ರಪಂಚ ನೋಡೋ ನನ್ನ ದೃಷ್ಟಿನೇ ಬದಲಿಸ್ತು. ನಾವು ಕಲೇನ ಎಷ್ಟು ಒಳಗ ತಗೋತಿವೊ ಅದು ನಮ್ನ ಒಳಗಿಂದ ಅಷ್ಟು ಬದಲಾಯಿಸಿಬಿಡ್ತದ. ಆಕಿ ಮಾತು ಕೇಳ್ದಾಗಿಂದ ನಾನು ಕ್ಯಾಮೆರಾ ತರಾದು ಬಿಟ್ಟೆ... ಅಲ್ಲಿಂದ ಇದು ನಂಗೆ ನನ್ನ ಜೀವನದ ಪ್ರಯಾಣ ಆಯ್ತು. ಹಂಗಾಗಿ, ನಾನು ಯಾರಿಗೂನು ನಾ ಯಾಕ ಇದು ಮಾಡ್ತಾ ಇದ್ದೇನಿ, ಏನೆಲ್ಲ ಅಂಕಿಅಂಶ ಕಲೆಕ್ಟ್ ಮಾಡಿದೆ ಅಂತ ಹೇಳ್ಬೇಕಾಗಿಲ್ಲ. ನಾನು ಈ ಅನುಭವಗಳ ಮೂಲ್ಕ ಬದುಕ್ತಾ ಇದ್ದೇನಿ, ಇವೆಲ್ಲದ್ರು ಮೂಲ್ಕ ಏನಾದ್ರು ಹೇಳ್ಬೋದಾ ಅಂತ ನೋಡ್ತೀನಿ, ಹೇಳಾಕ್ಕೇನೂ ಇಲ್ಲ, ಇವೆಲ್ಲ ಸುಮ್ನೆ ಸಂಗ್ರಹ ಅಂತನ್ನಿಸಿದ್ರೂ ಪರ್ವಾಗಿಲ್ಲ, ಇದ್ನೆಲ್ಲ ನಾ ಬದುಕೇನಲ್ಲ ಅಷ್ಟೆ ಸಾಕು...

ನಾನು ಮತ್ತೆ ನನ್ನ ಗಂಡ ಬೆಂಗಳೂರು ಬಿಟ್ಟು ಗುಲ್ಬರ್ಗಾಕ್ಕೆ ಬಂದ ಮೇಲೆ ಸಾಕಷ್ಟು ಕ್ಲಾರಿಟಿ ನಮಗೇ ಸಿಕ್ಕಾವ. ನಾವು ಕಲಾವಿದರಾಗಿ ಬರೀ ಕಾರ್ಯಕ್ರಮ ಕೊಡ್ತಾ ವೇದಿಕೆ ಮೇಲೆ ಇದ್ರೆ ಅದೇ ನಮ್ಮ 'ಐಡೆಂಟಿಟಿ' ಆಗ್ತದ, 'ಪರ್‌ಫಾರ್ಮರ್' ಅಂತ. ಕಲಾವಿದರಾದವ್ರು ಕೇವಲ ಪರ್‌ಫಾರ್ಮರ್ಸ್ ಅಲ್ಲ. ಕಲಾವಿದರು ಅಂದ್ರೆ ಆಲೋಚನೆ ಮಾಡವ್ರು, ಸಮುದಾಯದ ಹಾಗೇನೆ ಜೀವಂತ ಉಸಿರಾಡವ್ರು. ಎಲ್ಲೋ ಯಾರೋ ಸತ್ರೆ ನಮಗೆ ನೋವಾಗ್ಬೇಕು, ಈ ಸೂಕ್ಷ್ಮತೆ ಕಳಕೊಂಡ್ರೆ ಅಪಾಯ ಅದು... ಕಷ್ಟ. ಒಂದು ಶೋ ಆದ ಮೇಲೆ ಇನ್ನೊಂದು, ಮತ್ತೊಂದು ಅಂತ ಓಡ್ತಾ ಇದ್ರೆ ಆಗಾಂಗಿಲ್ಲ... ಹಂಗ ನೋಡಿದ್ರೆ ನಮ್ಮ ಕಾಲಾನೇ ಒಟ್ಟಾರೆಯಾಗಿ ಅವ್ಯವಸ್ಥೆದ್ದು ಅನ್ಸತ್ತ...

**◆ ನೀವು ಬೇರೆ ಏನೋ ಕೆಲಸ ಮಾಡಿಕೊಂಡಿದ್ದವರು. ಅದನ್ನ ಬಿಟ್ಟು ಹಾಡಿನ ಜಾಡಿಗೆ ಬಿದ್ದಿದ್ದು ಹೇಗೆ?**

ನಾನು ಹಾಡೋ ಕತಿಗೆ 'ಜಾತಿ' ಅನ್ನಾದು ಐತಿ... ನಾನು ಮೊದ್ಲು ಚೌಡಿಕಿ ಹಿಡ್ದಾಗ ನನ್ನಪ್ಪನ ಮನಸ್ಸಿಗೆ ಅದು ಚುಚ್ತು. ಯಾಕಂದ್ರ ನಮ್ಮ ಕಮ್ಯುನಿಟಿ ಒಳಗ ಹಲವಾರು ಹೆಣ್ಣಮಕ್ಕನ್ನ ಅವ್ರ ಇಚ್ಛೆಗೆ ವಿರುದ್ಧವಾಗಿ, ಎಳೆವಯಸ್ಸಲ್ಲೇ ದೇವದಾಸಿ ಮಾಡಿದ್ರು. ಇದೊಂದು ರೋಗ, ಇದು ನಮ್ಗೆ ಅಂಟ್ಗೊಂಡ ಕೊಳೆಕಲೆ. ಆದ್ರ ನಾವು ಬದುಕ್ತಾ ಇರೋ ಕಾಲದಾಗ ಈ ಕೊಳೆಕಲೆನೂ ಸಂಭ್ರಮಿಸ್ಬೇಕು. ಇತಿಹಾಸ್ದಲ್ಲಿ ಹೀಗೆಲ್ಲ ಆಗ್ಯಾದ ಅಂತ ನಾವು ಜನಕ್ಕೆ ಹೇಳಿ ತೋರಸ್ಬೇಕು. ಮತ್ತೆಮತ್ತೆ ಇದೇ ಕತೇನ ಹೇಳ್ತಾನೆ ಇರ್ಬೇಕು. ಸಮುದಾಯ ಆಗಿ ನಮ್ಗೆ ನೆನಪುಗಳು ಹೆಚ್ಚಿಲ್ಲ, ನಾವು ಎಲ್ಲಾನು ಬೇಗ ಮರ್ತು ಬಿಡ್ತೀವಿ. ಒಂದೊಂದ್ಸಾರಿ ನಂಗೆ ಬ್ಯಾರಿ ಕತೀನೆ ಬ್ಯಾಡ, ಯಲ್ಲಮ್ಮನ ಇದೊಂದೇ ಕತಿ ಸಾಕು, ಇದೊಂದು ಕತಿ ಇಟ್ಗೊಂಡು ಜೀವಮಾನ ಇಡೀ ಕೆಲ್ಸ ಮಾಡ್ಬೋದು ಅನ್ನಸ್ತದ. ಜನಪದ ಅಂದ್ರ ಇದೇ ತಾನೆ? ಒಬ್ಬ ಜನಪದ ಕಲಾವಿದ ಬದ್ಕು ನಡ್ಸಾಕ ಎಂತದ್ದೇ ಕೆಲ್ಸ ಮಾಡ್ಬೋದು, ಅಂವ ದರ್ಜಿ ಇರ್ಬೋದು, ಒಕ್ಕಲು ಕೆಲ್ಸ ಮಾಡ್ಬೋದು, ಗಾರೆ ಕೆಲ್ಸ ಮಾಡ್ಬೋದು... ಆದ್ರೆ ಆ ದಿನ ಸಂಜಿ ಗುಡಿ ಮುಂದ ಅಂವ ಯಲ್ಲಮ್ಮನ ವೇಷ ಹಾಕ್ತಾನ. ಈ ಅರ್ಥದಾಗ ಇದು ನಮ್ಮ 'ಐಡೆಂಟಿಟಿ'